ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ 10 ಸಾವಿರ ಕೋಟಿ ರು. ನೀಡುತ್ತೇವೆ ಎಂದು ಹಿಂದಿನ ಸರಕಾರ ಹೇಳಿಕೆ ನೀಡಿತ್ತು. ಆದರೆ ಎಂಟೂವರೆ ಸಾವಿರ ಕೋಟಿ ರು. ಮಾತ್ರ ಖರ್ಚು ಮಾಡಲಾಗಿದೆ. ಹೀಗಾದರೆ ಅಭಿವೃದ್ಧಿಯಾಗುವುದು ಹೇಗೆ?

-ಗೋವಿಂದ ಕಾರಜೋಳ
ಪ್ರತಿಪಕ್ಷ ಉಪನಾಯಕ

ರಾಜ್ಯ ಸರಕಾರ ಮಳೆ ಹಾನಿ ಪರಿಹಾರವಾಗಿ ನೀಡುತ್ತಿರುವ ಮೊತ್ತ ಓಬಿರಾಯನ ಕಾಲದ್ದು. ಈ ಮೊತ್ತವನ್ನು ಪಡೆದುಕೊಳ್ಳುವವರಿಗೂ ಮರ್ಯಾದೆ ಇರುವುದಿಲ್ಲ. ಕೊಡುವವರಿಗೂ ಮರ್ಯಾದೆ ಇರುವುದಿಲ್ಲ. ಇದು ಸಂತ್ರಸ್ತರಿಗೆ ಮಾಡುವ ಅಪಮಾನ.50 ಸಾವಿರ, ಒಂದು ಲಕ್ಷ ಕೊಡದೇ ಇರುವುದು ಉತ್ತಮ. ಬ್ರಿಟಿಷರ ಕಾಲದ ಮಾನದಂಡ ಬದಲಾಗಬೇಕು. ರಾಜ್ಯದಲ್ಲಿ ಮಳೆ ಹಾನಿ ಪರಿಹಾರವನ್ನು 20 ಲಕ್ಷಕ್ಕೇರಿಸಬೇಕು.

-ಸಿ.ಎಂ.ಇಬ್ರಾಹಿಂ ಕಾಂಗ್ರೆಸ್ ಸದಸ್ಯ

ಮಹದಾಯಿ ಹೋರಾಟಕ್ಕೆ ಜಯ ಸಿಗಲಿದೆ

ಸಂದರ್ಶನ: ನಾಗರಾಜ ಬಿ.ಎನ್. ಹುಬ್ಬಳ್ಳಿ

ಶಂಕರ ಪಾಟೀಲ ಮುನೇನಕೊಪ್ಪ
ನವಲಗುಂದ ಶಾಸಕ

ಸಾದಾ ಸೀದಾ ಮಾತು

- ಸಿಎಂ ಕುಮಾರಸ್ವಾಮಿ ಮಂಡಿಸಿದ ಬಜೆಟ್ ಬಗ್ಗೆ ನಿಮ್ಮ ಅಭಿಪ್ರಾಯ?

ಜೆಡಿಎಸ್, ಕಾಂಗ್ರೆಸ್ ದೋಸ್ತಿ ಸರಕಾರದಲ್ಲಿ ಅಭಿವೃದ್ಧಿ ಎನ್ನುವುದನ್ನು ಏನೂ ನಿರೀಕ್ಷಿಸಲು ಸಾಧ್ಯವಿಲ್ಲ. ಅಧಿಕಾರಕ್ಕಾಗಿ, ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವುದಕ್ಕಾಗಿ ಅವರು ಅಪವಿತ್ರ ಮೈತ್ರಿ ಮಾಡಿಕೊಂಡು ಸರಕಾರ ರಚನೆ ಮಾಡಿಕೊಂಡಿದ್ದಾರೆ. ಅಲ್ಲದೆ, ಸಚಿವ ಸ್ಥಾನಕ್ಕಾಗಿ ಎರಡೂ ಪಕ್ಷದ ಮುಖಂಡರು ಎಷ್ಟೆಲ್ಲ ಹೈಡ್ರಾಮ ಮಾಡಿದ್ದರು ಎನ್ನುವುದು ನಾಡಿನ ಜನತೆಗೇ ಗೊತ್ತಿದೆ. ಇಂತಹ ಅಧಿಕಾರ ದಾಹಿಗಳಿಂದ ನಾವು ಯಾವ ಅಭಿವೃದ್ಧಿಯನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಸಿಎಂ ಕುಮಾರಸ್ವಾಮಿ ಮಂಡಿಸಿದ ಆಯವ್ಯಯದಲ್ಲಿಯೇ ಅದು ಸಾಬೀತಾಗಿದೆ.

- ಮಹದಾಯಿ ಹೋರಾಟದಲ್ಲಿ ನಿಮ್ಮ ಪಾತ್ರ?

ನಲವತ್ತು ವರ್ಷಗಳಿಂದ ಕಳಸಾ-ಬಂಡೂರಿ, ಮಹದಾಯಿ ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ನವಲಗುಂದ ಕ್ಷೇತ್ರದ ಜನತೆ ಹೋರಾಡುತ್ತ ಬಂದಿದ್ದಾರೆ. ಕಳೆದ ಹದಿನೈದು ವರ್ಷಗಳಿಂದ ನಾನು ಸಹ ಆ ಕುರಿತು ನಡೆದ ಸಾಕಷ್ಟು ಹೋರಾಟ, ಪ್ರತಿಭಟನೆ, ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ರಾಜ್ಯ ಹಾಗೂ ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದೇನೆ. ಸದ್ಯ ಈ ಪ್ರಕರಣ ನ್ಯಾಯಾಧಿಕರಣದಲ್ಲಿದ್ದು, ಒಂದು ತಿಂಗಳಲ್ಲಿ ಆದೇಶ ಹೊರಬರಲಿದೆ. ನಮಗೆ ನ್ಯಾಯ ಸಿಗುವ ಭರವಸೆಯಿದೆ.

- ನವಲಗುಂದ ಕ್ಷೇತ್ರದ ಶಾಸಕರಾಗಿ ನಿಮ್ಮ ಜವಾಬ್ದಾರಿ?

ನನ್ನ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿದ್ದು ಅವೆಲ್ಲಕ್ಕೂ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಬೇಕಿದೆ. ಕುಡಿಯುವ ನೀರಿನ ಸಮಸ್ಯೆ ಸಾಕಷ್ಟು ಇರುವುದರಿಂದ ಹೊಸ ಯೋಜನೆಯನ್ನು ಜಾರಿಗೆ ತಂದು, ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಶ್ರಮಿಸಬೇಕಿದೆ. ರೈತರ ಜಮೀನಿಗೆ ಬೇಕಾದ ಅಗತ್ಯ ರಸ್ತೆ, ಒಳಚರಂಡಿ, ಗಟಾರುಗಳನ್ನು ಸರಿ ಪಡಿಸಿ ಮೂಲ ಸೌಕರ್ಯ ಒದಗಿಸುವುದು ನನ್ನ ಜವಾಬ್ದಾರಿ. ಈ ನಿಟ್ಟಿನಲ್ಲಿ ಸರಕಾರದಿಂದ ಯಾವೆಲ್ಲ ಸೌಲಭ್ಯಗಳು ಹಾಗೂ ಅನುದಾನಗಳು ದೊರೆಯುತ್ತವೆಯೋ ಅವೆಲ್ಲವನ್ನು ಪಡೆದುಕೊಳ್ಳುತ್ತೇನೆ. ಮುಂದಿನ ಐದು ವರ್ಷಗಳಲ್ಲಿ ನವಲಗುಂದ ಕ್ಷೇತ್ರವನ್ನು ಮಾದರಿ ಮತಕ್ಷೇತ್ರವನ್ನಾಗಿ ಮಾಡುತ್ತೇನೆ.

- ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ನಿಮ್ಮ ಯೋಜನೆ?

ನವಲಗುಂದ ತಾಲೂಕಿನಲ್ಲಿ ಸಾಕಷ್ಟು ಹಳ್ಳಗಳು ಹರಿಯುತ್ತವೆ. ಮಳೆ ಪ್ರಮಾಣ ಜಾಸ್ತಿಯಾದಾಗ ಹಳ್ಳದ ಒಡ್ಡು ಒಡೆದು ಅಕ್ಕಪಕ್ಕದ ಹೊಲಗಳಿಗೆಲ್ಲ ನೀರು ನುಗ್ಗುತ್ತವೆ. ಅದನ್ನು ತಡೆಗಟ್ಟಲು ಸೂಕ್ತ ಯೋಜನೆ ತಯಾರಿಸಿ ಆ ನಿಟ್ಟಿನಲ್ಲಿ ಕಾಮಗಾರಿ ಹಮ್ಮಿಕೊಳ್ಳಬೇಕಿದೆ. ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಸಂಗ್ರಹಿಸಿ ಕೆರೆ, ಕಟ್ಟೆಗಳಿಗೆ ಸರಬರಾಜು ಮಾಡುವುದು ಪ್ರಮುಖ ಚಿಂತನೆಯಾಗಿದೆ. ಕೆರೆಗಳಲ್ಲಿ ತುಂಬಿರುವ ಹೂಳನ್ನೆಲ್ಲ ಎತ್ತಿ ಬೇಸಿಗೆಯಲ್ಲೂ ಸಾಕಷ್ಟು ನೀರು ಸಂಗ್ರಹವಾಗುವಂತೆ ನೋಡಿಕೊಳ್ಳಲಾಗುವುದು. ಪ್ರತಿಯೊಂದು ಗ್ರಾಮದಲ್ಲಿ ಹಾಗೂ ಅಗತ್ಯವಿರುವ ಸ್ಥಳದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ ಕುಡಿಯುವ ನೀರಿನ ಬೇಡಿಕೆ ಈಡೇರಿಸಲಾಗುವುದು.

- ಕ್ಷೇತ್ರದ ಜನರ ಆರೋಗ್ಯದ ಕುರಿತು ನಿಮ್ಮ ಯೋಜನೆ?

ಚಿಕ್ಕ ಪುಟ್ಟ ಆರೋಗ್ಯ ಸಮಸ್ಯೆ ಎದುರಾದಾಗ ಸಾರ್ವಜನಿಕರು ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಆಗಮಿಸಬೇಕಾದ ಗಂಭೀರ ಸಮಸ್ಯೆ ನಮ್ಮ ಕ್ಷೇತ್ರದಲ್ಲಿದ್ದು, ಅಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತುರ್ತು ಚಿಕಿತ್ಸೆ ನೀಡುವಲ್ಲಿ ಕಠಿಣ ಕ್ರಮ ಕೈಗೊಳ್ಳುತ್ತೇನೆ. ಅಗತ್ಯ ಪ್ರಮಾಣದಲ್ಲಿ ಔಷಧಿ ಸಂಗ್ರಹ, ಸೂಕ್ತ ಸಂದರ್ಭದಲ್ಲಿ ವೈದ್ಯರ ಲಭ್ಯತೆ ಹಾಗೂ ಪ್ರಾಥಮಿಕವಾಗಿ ದೊರೆಯಬೇಕಾದ ಎಲ್ಲ ಚಿಕಿತ್ಸೆಗಳು ಸ್ಥಳೀಯವಾಗಿಯೇ ದೊರೆಯುವಂತಾಗಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಸಚಚಿವರ ಜತೆ ಚರ್ಚಿಸಿ ಅಗತ್ಯ ಸೌಲಭ್ಯ ಪಡೆಯುವಂತೆ ಮಾಡಲಾಗುವುದು.

ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ | ಹಣಕಾಸು ಹೊಂದಿಸಲು ಸಾರ್ವಜನಿಕರಿಂದ 50 ಸಾವಿರ ಕೋಟಿ ರು. ಸಂಗ್ರಹಿಸಿ

ಕೃಷ್ಣಾ ಕೊಳ್ಳದ ಯೋಜನೆಗಳಿಗೆ ಬಾಂಡ್ ತನ್ನಿ: ಬಿಎಸ್‌ವೈ ಸಲಹೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಗಳಿಗೆ ಹಣಕಾಸು ಹೊಂದಿಸಲು 50 ಸಾವಿರ ಕೋಟಿ ರು. ಮೊತ್ತದ ಬಾಂಡ್‌ಗಳನ್ನು ಬಿಡುಗಡೆ ಮಾಡಿ ಹಣ ಸಂಗ್ರಹಿಸಿ ಎಂದು ಪ್ರತಿಪಕ್ಷ ನಾಯಕ ಬಿ.ಎಸ್.ಯಡಿಯೂರಪ್ಪ ಸರಕಾರಕ್ಕೆ ಸಲಹೆ ನೀಡಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ. ಇದಕ್ಕೆ ಬೇಕಾದ ಸಂಪನ್ಮೂಲವನ್ನು ಸಾರ್ವಜನಿಕರಿಂದ ಬಾಂಡ್ ಮೂಲಕ ಸಂಗ್ರಹಿಸಿ. ನಾವು ಇದಕ್ಕೆ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದು ಭರವಸೆ ನೀಡಿದರು. ಯೋಜನೆಗಳನ್ನು ಪೂರ್ಣಗೊಳಿಸಲು 50 ಸಾವಿರ ಕೋಟಿ ರು. ಬೇಕಾಗಬಹುದು. ಬಾಂಡ್ ಮೂಲಕ ಹಣ ಸಂಗ್ರಹಿಸಿದರೆ ಸಮಸ್ಯೆಯಾಗುವುದಿಲ್ಲ, ಇದನ್ನು ಬಿಟ್ಟು ಹೀಗೇ ಆದರೆ 25 ವರ್ಷವಾದರೂ ಯೋಜನೆಗಳು ಪೂರ್ಣಗೊಳ್ಳುವುದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

70 ಸಾವಿರ ಕೋಟಿ ಕೊಡಿ: ಪ್ರತಿಪಕ್ಷ ಉಪ ನಾಯಕ ಗೋವಿಂದ ಕಾರಜೋಳ ಮಾತನಾಡಿ, ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ನೀರಾವರಿ ಯೋಜನೆಗೆ 70 ಸಾವಿರ ಕೋಟಿ ರು. ಅನುದಾನ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ಪರಿಹಾರ ಮತ್ತು ಪುನರ್ವಸತಿಗೆ 50 ಸಾವಿರ ಕೋಟಿ ರು. ಹಾಗೂ ಕಾಲುವೆ ಮತ್ತಿತರ ಅಭಿವೃದ್ಧಿ ಕಾರ್ಯಗಳಿಗೆ 20 ಸಾವಿರ ಕೋಟಿ ರು. ನೀಡಬೇಕು. ಕಾಲಮಿತಿಯೊಳಗೆ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.

ಆಯುಧವಿಲ್ಲದೇ ಯುದ್ಧಕ್ಕೆ: ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನಂತೆ ನಾವು ನಮ್ಮ ಪಾಲಿನ 250 ಟಿಎಂಸಿ ನೀರನ್ನೂ ಬಳಕೆ ಮಾಡಿಕೊಳ್ಳಲು ಆಗುತ್ತಿಲ್ಲ. ಆಲಮಟ್ಟಿ ಜಲಾಶಯದಿಂದ ಸಂತ್ರಸ್ಥರಾದವರಿಗೆ ಪುನರ್ವಸತಿ ಕಲ್ಪಿಸಿಲ್ಲ ಎಂದು ಟೀಕಿಸಿದರು ಬಜೆಟ್ ಬಗ್ಗೆ ಮಾತನಾಡುವುದೆಂದರೆ ಆಯುಧವಿಲ್ಲದೇ ಯುದ್ಧ ಮಾಡಲು ಹೊರಟಂತಾಗುತ್ತದೆ. ಈ ಸರಕಾರ ಕುಂಟರು, ಕುರುಡರನ್ನು ಹೊತ್ತು ಹೊರಟಂತೆ ಭಾಸವಾಗುತ್ತಿದೆ. ಅನಿಲ ಭಾಗ್ಯ ಯೋಜನೆಯಲ್ಲಿ ತಕ್ಷಣ ಸಿಲಿಂಡರ್, ಸ್ಟವ್ ವಿತರಿಸಬೇಕು. ಆದರೆ ಸ್ಟವ್ ಮೇಲೆ ಸಿದ್ದರಾಮಯ್ಯ ಅವರ ಭಾವಚಿತ್ರವಿರುವುದರಿಂದ ವಿತರಿಸುತ್ತಿಲ್ಲ ಎಂದು ಆರೋಪಿಸಿದರು.

ಬಾಂಡ್ ಮೂಲಕ ನೀರಾವರಿ ಯೋಜನೆಗಳಿಗೆ ಹಣ ಸಂಗ್ರಹಿಸುವಂತೆ ಸಲಹೆ ನೀಡಿದ ಪ್ರತಿಪಕ್ಷ ನಾಯಕ ಬಿ.ಎಸ್.ಯಡಿಯೂರಪ್ಪ.

ಚಿನ್ನದುಂಗುರ ತೊಡಿಸಿ ಮೆರವಣಿಗೆ ಮಾಡ್ತೀವಿ

ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿದರೆ ತೋಟಗಾರಿಕಾ ಸಚಿವ ಎಂ.ಸಿ.ಮನಗೂಳಿ ಮಾವ ಅವರಿಗೆ ರೇಷ್ಮೆ ರುಮಾಲು ತೊಡಿಸಿ, ಚಿನ್ನದ ಉಂಗುರ ಹಾಕಿ ಚಕ್ಕಡಿ ಗಾಡಿಯಲ್ಲಿ ಮೆರವಣಿಗೆ ಮಾಡುವುದಾಗಿ ಗೋವಿಂದ ಕಾರಜೋಳ ಹೇಳಿದರು. ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ ಪೂರ್ಣಗೊಳ್ಳುವವರೆಗೆ ಕಾಲಿಗೆ ಚಪ್ಪಲಿ ಹಾಕುವುದಿಲ್ಲ ಎಂದು ನೀವು ಹಿಂದೆ ಶಪಥ ಮಾಡಿದ್ರಿ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರೇ ಬಂದು ಆಗ ನಿಮ್ಮ ಮನವೊಲಿಸಿದ್ದರು. ಈಗ ದೇವೇಗೌಡರು ಮತ್ತು ಸಿಎಂ ಕುಮಾರಸ್ವಾಮಿ ಮನವೊಲಿಸಿ ಯೋಜನೆ ಪೂರ್ಣಗೊಳಿಸಿ ಮಾವ.

ಸಿದ್ದೇಶ್ವರ ಗುಡಿಯಿಂದ ಸಿಂಧಗಿಯವರೆಗೂ ಚಕ್ಕಡಿ ಗಾಡಿಯಲ್ಲಿ ನಿಮ್ಮನ್ನು ಮೆರವಣಿಗೆ ಮಾಡುತ್ತೇವೆ ಎಂದು ತಿಳಿಸಿದರು.

ಬಾದಾಮಿ ನಿರ್ಲಕ್ಷ್ಯವೇಕೆ ?

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ಬಾದಾಮಿ ವಿಧಾನ ಸಭಾ ಕ್ಷೇತ್ರದ ಬಗ್ಗೆ ಸರಕಾರ ನಿರ್ಲಕ್ಷ್ಯ ವಹಿಸಿದೆ. ಇದು ಸರಿಯಲ್ಲ. ತಕ್ಷಣ ಅನುದಾನ ಬಿಡುಗಡೆ ಮಾಡಿ. ಸಿದ್ದರಾಮಯ್ಯ ಅವರನ್ನು ಚುನಾಯಿಸಿರುವುದಕ್ಕೆ ಬಾಗಲಕೋಟೆ ಜಿಲ್ಲೆಗೆ ಸಿಎಂ ಕುಮಾರಸ್ವಾಮಿ ಹೊಸ ಯೋಜನೆ ಘೋಷಿಸುತ್ತಿಲ್ಲ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬರುತ್ತಿದೆ ಎಂದು ಗೋವಿಂದ ಕಾರಜೋಳ ತಿಳಿಸಿದರು.

ಹೋರಿ ಬೇಡ, ಎತ್ತು ಬೇಕು...!

- ಹೋರಿಗೆ ದುಡಿಯುವ ಕಾಯಕ ಗೊತ್ತಿಲ್ಲ
- ವ್ಯವಸ್ಥೆಯಲ್ಲಿ ದುಡಿಯುವ ಎತ್ತು ಬೇಕು ಎಂದ ರಾಮಸ್ವಾಮಿ
- ಆಡಳಿತ ಹಳಿ ತಪ್ಪದಂತೆ ನೋಡಿಕೊಳ್ಳಿ

ವಿಧಾನಸಭೆ: ರಾಜ್ಯದ ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು. ಸಾರ್ವಜನಿಕರ ತೆರಿಗೆ ಹಣ ಸೋರಿಕೆ ಯಾಗುವುದನ್ನು ತಡೆಗಟ್ಟಬೇಕು. ಮೇಯುವವರನ್ನು ಹೊರಗ ಟ್ಟಬೇಕು. ನಮಗೆ ಹೋರಿಗಳು ಬೇಕಾ ಗಿಲ್ಲ; ಎತ್ತುಗಳು ಬೇಕು... ಬಜೆಟ್ ಮೇಲಿನ ಚರ್ಚೆಯಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ ಸದಸ್ಯ ಎ.ಟಿ.ರಾಮಸ್ವಾಮಿ, ಹೋರಿಗೆ ದುಡಿಯುವ ಕಾಯಕ ಗೊತ್ತಿಲ್ಲ. ಆದರೆ ಎತ್ತುಗಳು ದುಡಿಯುತ್ತವೆ. ಆದ್ದರಿಂದ ಎತ್ತುಗಳು ಬೇಕು ಎಂದು ಸೂಚ್ಯವಾಗಿ ತಿಳಿಸಿದರು. ಕಾವೇರಿ, ಕೃಷ್ಣಾ, ಮಹದಾಯಿ ವಿವಾದದ ಬಗ್ಗೆ ಸರಕಾರ ಗಮನ ಹರಿಸಬೇಕು. ಬಡವರಿಗೆ ಸೌಲಭ್ಯಗಳು ಉಚಿತವಾಗಿ ಸಿಗಬೇಕು. ಖರೀದಿಸಿದೆ ಎಂಬ ಭಾವನೆ ಬರಬಾರದು. ಪ್ರತಿಪಕ್ಷದವರು ಭೂತಗನ್ನಡಿ ಹಿಡಿದು ತಪ್ಪುಗಳಾದರೆ ಎಚ್ಚರಿಸಲಿ ಎಂದು ಸಲಹೆ ನೀಡಿದರು.

ಹಳದಿ ಕಣ್ಣಲ್ಲಿ ನೋಡಬೇಡಿ: ಶ್ರೀಮಂತರು ಮತ್ತು ಬಡವರ ನಡುವೆ ದೊಡ್ಡ ಕಂದಕವಿದೆ. ಪ್ರತಿಪಕ್ಷ ಸಮರ್ಥವಾಗಿ ಕಾರ್ಯನಿರ್ವಹಿಸಲಿ. ಆದರೆ ಎಲ್ಲವನ್ನೂ ಹಳದಿ ಕಣ್ಣಿನಿಂದ ನೋಡಬೇಡಿ. ಆಡಳಿತ ಹಳಿ ತಪ್ಪದಂತೆ ನೋಡಿಕೊಳ್ಳಿ ಎಂದು ಸಲಹೆ ನೀಡಿದರು.

ಸೈನಿಕರು ಮತ್ತು ರೈತರನ್ನು ಸರಕಾರ ಅವಮಾನಿ ಸಬಾರದು. ಸೌಲಭ್ಯಕ್ಕಾಗಿ ತಾಲೂಕು ಮತ್ತು ಜಿಲ್ಲಾಧಿಕಾರಿ ಕಚೇರಿಗೆ ಅಲೆಯುವಂತೆ ಮಾಡಬಾರದು. ಆದರೆ ಭಿಕ್ಷೆ ಕೇಳುವಂತೆ ಸೌಲಭ್ಯಕ್ಕಾಗಿ ಅಲೆಯುವ ಪರಿಸ್ಥಿತಿ ಇದ್ದು ಇದು ತಪ್ಪಬೇಕು ಎಂದು ಒತ್ತಾಯಿಸಿದರು.

ಮೊಟ್ಟೆ, ಮಾಂಸ ಮತ್ತು ಪ್ರತಿಪಕ್ಷ!

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಎ.ಟಿ.ರಾಮಸ್ವಾಮಿ ಅವರು, ಪ್ರತಿಪಕ್ಷದಲ್ಲಿ ಮೊಟ್ಟೆ, ಮಾಂಸ ಹೆಚ್ಚು ತಿನ್ನುವವರು ಹೆಚ್ಚಿನ ಸಂಖ್ಯೆಯಲ್ಲಿಲ್ಲ ಎಂದು ಹೇಳಿದರು. ಆದರೆ ಇದನ್ನು ಅಲ್ಲಗಳೆದ ಪ್ರತಿಪಕ್ಷ ಉಪ ನಾಯಕ ಗೋವಿಂದ ಕಾರಜೋಳ, ನಿಮ್ಮವರಿಗಿಂತ ನಾವೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದೇವೆ ಎಂದು ಹೇಳಿದರು.ಆಗ ರಾಮಸ್ವಾಮಿ ಮಾತನಾಡಿ, ನಿಮ್ಮ ನಾಯಕರನ್ನು (ಬಿ.ಎಸ್.ಯಡಿಯೂರಪ್ಪ) ನೋಡಿ ನಾನು ಹಾಗೆ ಹೇಳಿದೆ. ಮೊಟ್ಟೆ, ಮಾಂಸದಲ್ಲಿ ವಿಟಮಿನ್‌ಗಳು ಹೆಚ್ಚಾಗಿರುತ್ತವೆ. ತಿನ್ನಿರಿ, ಆರೋಗ್ಯಕ್ಕೆ ಒಳ್ಳೆಯದು ಎಂದು ನಗುತ್ತಲೇ ಮಾತಿನಲ್ಲೇ ಕಾಲೆಳೆದರು.

ಅವಸರಕ್ಕೆ ಬಿದ್ದು ಕತ್ತೆ ಜತೆ ಮದುವೆ!

ವಿಧಾನಸಭೆ: ಅಧಿಕಾರಕ್ಕಾಗಿ ಅವಸರದಲ್ಲಿ ಕತ್ತೆ ಜತೆ ಮದುವೆ ಮಾಡಿಕೊಳ್ಳಲಾಯಿತು ಎಂಬ ವಿಷಯ ವಿಧಾನಸಭೆಯಲ್ಲಿ ಬುಧವಾರ ಸ್ವಾರಸ್ಯಕರ ಚರ್ಚೆಗೆ ನಾಂದಿ ಹಾಡಿತು. ಬಜೆಟ್ ಮೇಲಿನ ಚರ್ಚೆಯಲ್ಲಿ ಸದಸ್ಯ ಎ.ಟಿ.ರಾಮಸ್ವಾಮಿ ಮಾತನಾಡುತ್ತಾ, ಕುರುಡರು, ಕುಂಟರನ್ನು ಹೊತ್ತೊಯ್ಯುವ ಸರಕಾರವಿದು ಎಂದು ಪ್ರತಿಪಕ್ಷದವರು ಆರೋಪಿಸಿದ್ದಾರೆ. ಇದನ್ನು ಸಂಪೂರ್ಣ ಒಪ್ಪದಿದ್ದರೂ ಭಾಗಶಃ ಒಪ್ಪುತ್ತೇನೆ. ವಿಭಜಿತ ತೀರ್ಪು ಬಂದಿದ್ದರಿಂದ ಹೀಗಾಯಿತು. ಆದರೆ 104 ಸ್ಥಾನ ಗಳಿಸಿದ ಬಿಜೆಪಿಯವರು ಆತುರದಲ್ಲಿದ್ದಾರೆ ಎಂದರು. ಇದು ಸಾಕಷ್ಟು ಚರ್ಚೆಗೆ ಕಾರಣವಾಯಿತು.

ಬಸವರಾಜ್ ಬೊಮ್ಮಾಯಿ: ನಿಮ್ಮದು ಅವಧಿಪೂರ್ವ ಮಗು. 9 ತಿಂಗಳು ಕಾಯಲಿಲ್ಲ. ಇದು ಆತುರ ಬಿದ್ದಿದ್ದರಿಂದ ಆಗಿದ್ದಲ್ವಾ. ಅನುಕೂಲಕ್ಕಾಗಿ ಹಿಂದೆ-ಮುಂದೆ ಹೋಗುವುದಲ್ಲ. ಮಿಂಚಿನ ವೇಗದಲ್ಲಿ ಹೊಂದಾಣಿಕೆ ಮಾಡಿಕೊಂಡಿರಿ.

ರಾಮಸ್ವಾಮಿ: ಸರ್ಕಸ್ ಮಾಲಿಕನೊಬ್ಬ ತಂತಿ ಮೇಲೆ ನಡೆಯುವ ಮಗಳಿಗೆ ನೀನು ಕೆಳಗೆ ಬಿದ್ದರೆ ಕತ್ತೆಯೊಂದಿಗೆ ಮದುವೆ ಮಾಡುತ್ತೇನೆ ಎಂದ. ಕತ್ತೆ ಆಸೆಯಿಂದ ಕಾಯುತ್ತಿತ್ತು. ಆದರೆ ಮಗಳು ಬೀಳಲಿಲ್ಲ.

ಮಾಧುಸ್ವಾಮಿ: ಗಾಂಭೀರ್ಯತೆ ಇರಬೇಕು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೂ, ಬಜೆಟ್ ಮೇಲಿನ ಚರ್ಚೆಗೂ ವ್ಯತ್ಯಾಸವಿಲ್ಲವೇ.

ರಾಮಸ್ವಾಮಿ: ನಾನೂ ಅಲ್ಲಿಗೇ ಬರುತ್ತಿದ್ದೇನೆ. ಕೊನೆಗೂ ಅವಳು ಬೀಳಲಿಲ್ಲ, ಕತ್ತೆ ಸೊರಗಿ ಹೋಯಿತು.

ಸಿ.ಟಿ.ರವಿ: ಇದನ್ನು ಕೇಳಿ ನನಗೆ ವಾಟ್ಸಪ್ ಸಂದೇಶವೊಂದು ಬಂದಿದ್ದು ನೆನಪಾಯಿತು.

ಕಾಂಗ್ರೆಸ್-ಜೆಡಿಎಸ್ ಕತ್ತೆಗಳ ಮದುವೆಯಿಂದ ಒಳ್ಳೆಯ ಮಳೆಯಾಗಿದೆ ಎಂದು ಯಾರೋ ಕಳುಹಿಸಿದ್ದರು.

ಬಂಡೆಪ್ಪ ಕಾಶೆಂಪುರ್: ಏನೋ ಒಂದು. ಒಟ್ಟಾರೆ ಒಳ್ಳೆಯ ಮಳೆಯಾಗುತ್ತಿದೆಯಲ್ಲಾ. ಚರ್ಚೆ ವಿಷಯಾಂತರವಾಗುತ್ತಿರುವುದನ್ನು ಗಮನಿಸಿದ ಸಭಾಧ್ಯಕ್ಷರು, ವಿಷಯವನ್ನು ಇಲ್ಲಿಗೆ ಮುಗಿಸಿ ಎಂದು ಹೇಳಿ ರಾಮಸ್ವಾಮಿಯವರು ಮಾತು ಮುಂದುವರಿಸುವಂತೆ ಹೇಳಿದರು.

ಕತ್ತೆ ಮದುವೆ ಬಗ್ಗೆ ವಿಷಯ ಪ್ರಸ್ತಾಪಿಸಿದ ಎ.ಟಿ.ರಾಮಸ್ವಾಮಿ.

- ಸರ್ಕಸ್ ಮಾಲೀಕನ ಮಗಳು ಮತ್ತು ಕತ್ತೆಯ ಕತೆ ಹೇಳಿದ ರಾಮಸ್ವಾಮಿ
- ಕತ್ತೆಗಳ ಮದುವೆಯಿಂದಲೇ ಹೆಚ್ಚು ಮಳೆಯಾಗುತ್ತಿದೆ ಎಂದು ವ್ಯಂಗ್ಯವಾಡಿದ ಸಿ.ಟಿ.ರವಿ
- ಮಳೆ ಬಂತಲ್ಲಾ ಸಾಕು, ಮದುವೆಯಾದ್ರೂ ಪರವಾಗಿಲ್ಲ ಎಂದ ಬಂಡೆಪ್ಪ ಕಾಶೆಂಪುರ್

ದೇವರುಗಳಿಗೂ ಬಂತಾ ಕೆಟಗೆರಿ?

ವಿಧಾನಪರಿಷತ್ತು: ರಾಜ್ಯದಲ್ಲಿ ದೇವರುಗಳಿಗೆ ಬಡವ, ಶ್ರೀಮಂತ ಎಂದು ಕ್ಯಾಟಗೆರಿ ನೀಡಲಾಗಿದೆ. ಶ್ರೀಮಂತರ ದೇವರುಗಳ ದೇವಸ್ಥಾನಕ್ಕೆ ಹೆಚ್ಚು ಅನುದಾನ ನೀಡಲಾಗುತ್ತಿದೆ. ಬಡ ದೇವರುಗಳ ಕಡೆ ಕರುಣೆ ತೋರಿಸಿ ಪುಣ್ಯ ಕಟ್ಟಿಕೊಳ್ಳಿ ಎಂದು ಬಿಜೆಪಿ ಸದಸ್ಯ ಕೆ.ಬಿ.ಶಾಣಪ್ಪ ಸರಕಾರಕ್ಕೆ ಮನವಿ ಮಾಡಿದರು.

ವಿಧಾನಪರಿಷತ್ತಿನ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ಆರ್. ಧರ್ಮಸೇನ್ ಪ್ರಸ್ತಾಪಿಸಿದ ವಿಷಯಕ್ಕೆ ಧ್ವನಿಗೂಡಿಸಿದ ಸದಸ್ಯ ಶಾಣಪ್ಪ, ರಾಜ್ಯದಲ್ಲಿ ದೇವಸ್ಥಾನಗಳಿಗೆ ಎಬಿಸಿಡಿ ಎಂದು ಕ್ಯಾಟಗೆರಿ ನೀಡಲಾಗಿದೆ. ಎಲ್ಲ ದೇವರು ಒಂದೇ. ಬಡ ದೇವಸ್ಥಾನ ಜೀರ್ಣೋದ್ಧಾರಕ್ಕೂ ಹೆಚ್ಚಿನ ಅನುದಾನ ನೀಡಿ ಎಂದು ಆಗ್ರಹಿದರು.

ಮುರುಗಮ್ಮ, ದುರ್ಗಮ್ಮನಂತಹ ನೂರಾರು ಬಡ ದೇವರುಗಳಿವೆ. ಈ ದೇವರುಗಳನ್ನು ಎಸ್‌ಸಿ/ಎಸ್ಟಿಗೆ ಮಾತ್ರ ಸೀಮಿತ ಮಾಡಿಬಿಟ್ಟಿದೆ. ಆ ದೇವರುಗಳನ್ನು ಮರೆಯಬೇಡಿ. ಮುಖ್ಯಮಂತ್ರಿಗಳಿಗೆ ಒತ್ತಡ ತಂದಾದರೂ ಸಣ್ಣ ದೇವರುಗಳ ಉದ್ಧಾರಕ್ಕೆ ಶ್ರಮಿಸಿ ಎಂದರು. ಧರ್ಮಸೇನ್ ಮಾತನಾಡಿ, ನಮ್ಮ ದೇವರುಗಳತ್ತ ಸಚಿವರು ಸ್ವಲ್ಪ ಗಮನ ಕೊಡಿ. ಇಲ್ಲ ಅಂದರೆ ದೇವರು ಕೋಪಗೊಳ್ಳುತ್ತವೆ. ಆಮೇಲೆ ನೀವು ಅಧಿಕಾರ ಕಳೆದುಕೊಳ್ಳತೀರಾ ಎಂದು ಹಾಸ್ಯವಾಗಿ ಹೇಳಿದರು. ಇದಕ್ಕೆ ಧ್ವನಿಗೂಡಿಸಿದ ಸದಸ್ಯ ಸಂದೇಶ್ ನಾಗರಾಜ್ ಬಡ ದೇವಸ್ಥಾನಗಳಿಗೆ ಬೇಗ ಅನುದಾನ ಬಿಡಗಡೆ ಮಾಡಿ ನಿಮ್ಮ ಸ್ಥಾನ ಭದ್ರಪಡಿಸಿಕೊಳ್ಳಿ ಎಂದಾಗ ಸದನದಲ್ಲಿ ನಗೆಯ ಬುಗ್ಗೆ ಎದ್ದಿತ್ತು.

ಇದಕ್ಕೆ ಮುಜರಾಯಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ಅಧಿಕಾರ, ಬರುತ್ತದೆ, ಹೋಗುತ್ತದೆ. ಈ ಬಗ್ಗೆ ನಾನೇನು ತಲೆಕೆಡಿಸಿಕೊಂಡಿಲ್ಲ ಎಂದು ತೀಕ್ಷ್ಣವಾಗಿ ಉತ್ತರಿಸಿದರು. ಮಧ್ಯೆ ಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ ನಿಮ್ಮ ಮಂತ್ರಿಗಿರಿ ಹೋಗುವುದಿಲ್ಲ ಬಿಡಿ ಎಂದು ಸಚಿವರಿಗೆ ಧೈರ್ಯ ತುಂಬಿದರು.

126 ಕೋಟಿ ರು. ಅನುದಾನ: ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34556 ದೇವಸ್ಥಾನಗಳಿವೆ. ದಿನದಿಂದ ದಿನಕ್ಕೆ ದೇವಸ್ಥಾನಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೊಸ ದೇವಸ್ಥಾನಗಳಿಂದಲೂ ಅನುದಾನದ ಬೇಡಿಕೆ ಹೆಚ್ಚಿದೆ. ಆದರೆ ಸರಕಾರದಲ್ಲಿ ಅನುದಾನ ಕಡಿಮೆಯಿದೆ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 126 ಕೋಟಿ ರು. ಅನುದಾನ ಬಿಡುಗಡೆ ಆಗಿದೆ. ಸಿ ಕೆಟಗೆರಿಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಒತ್ತು ನೀಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಮೇಲ್ಮನೆಯಲ್ಲಿ ವಿಶ್ವವಾಣಿ ವರದಿ ಪ್ರಸ್ತಾಪಿಸಿದ ಬಿಜೆಪಿಯ ಸುನೀಲ್ | ಮಳೆ ಹಾನಿ ಪ್ರದೇಶಗಳಿಗೆ ತ್ವರಿತವಾಗಿ ಸ್ಪಂದಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ

ಮಳೆಯಿಂದ ಮನೆ ಕಳೆದುಕೊಂಡವರಿಗೆ ಆಶ್ರಯ ಯೋಜನೆ

ವಿಶ್ವವಾಣಿ ಸುದ್ದಿಮನೆ ವಿಧಾನಪರಿಷತ್ತು

ಸದನದಲ್ಲಿ ವಿಶ್ವವಾಣಿ

ರಾಜ್ಯದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಸಂಪೂರ್ಣವಾಗಿ ಮನೆ ಕಳೆದುಕೊಂಡವರಿಗೆ ಆಶ್ರಯ ಯೋಜನೆಯಲ್ಲಿ ವಸತಿ ಕಲ್ಪಿಸಲಾಗುವುದು ಎಂದು ಕಂದಾಯ ಸಚಿವ ಆರ್.ವಿ.ದೇಶಪಾಂಡೆ ಭರವಸೆ ನೀಡಿದರು.

ವಿಧಾನಪರಿಷತ್ತಿನ ಪ್ರಶ್ನೋತ್ತರ ಅವಧಿಯಲ್ಲಿ ವಿಶ್ವವಾಣಿ ಪತ್ರಿಕೆಯಲ್ಲಿನ ಮಳೆ ಪೀಡಿತ ಪ್ರದೇಶಗಳಿಗೆ ಕಂದಾಯ ಸಚಿವರು ಪರಿಶೀಲನೆ ನಡೆಸಿದ ವರದಿಯನ್ನು ಪ್ರಸ್ತಾಪ ಮಾಡಿದ ಬಿಜೆಪಿ ಸದಸ್ಯ ಸುನೀಲ್ ಸುಬ್ರಮಣಿ, ಕರಾವಳಿಯಲ್ಲಿ ಸುರಿಯುತ್ತಿರುವ ಮಳೆಯಿಂದ ಹಾನಿಗೊಳಗಾಗಿರುವ ಸಂತ್ರಸ್ತರಿಗೆ ಇನ್ನೂ ಪರಿಹಾರ ತಲುಪಿಲ್ಲ. ಕೂಡಲೆ ಸಚಿವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರಾವಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಸುರಿಯುತ್ತಿರುವ ಮಳೆಯಿಂದ ಹಾನಿಗೊಳಗಾಗುವ ಸಂತ್ರಸ್ತರಿಗೆ ಕೂಡಲೆ ಸ್ಪಂದಿಸಿ ಪರಿಹಾರ ನೀಡಲು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮಳೆಹಾನಿಗೆ ತತ್‌ಕ್ಷಣ ಸ್ಪಂದಿಸಲು ಎಲ್ಲ ಜಿಲ್ಲಾಧಿಕಾರಿಗಳ ಖಾತೆಗೆ ತಲಾ 10 ಕೋಟಿ ಹಣ ಸಂದಾಯವಾಗಿದೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರಕಾರದ ಮಾನದಂಡಗಳ ಆಧಾರದ ಮೇಲೆ ಮಳೆ ಹಾನಿ ಪೀಡಿತರಿಗೆ ಪರಿಹಾರ ನೀಡಲಾಗುತ್ತಿದೆ. ಶೇ.25ರಷ್ಟು ಮನೆಗಳಿಗೆ ಹಾನಿಯಾದರೆ 50 ಸಾವಿರ, ಶೇ.75ರಷ್ಟು ಹಾನಿಯಾಗಿದ್ದರೆ 75 ಸಾವಿರ, ಸಂಪೂರ್ಣ ಹಾನಿಯಾದರೆ 90 ಸಾವಿರ ರು. ಪರಿಹಾರ ನೀಡಲು ಆದೇಶ ನೀಡಲಾಗಿದೆ. ಸಂಪೂರ್ಣವಾಗಿ ಮನೆ ಕಳೆದುಕೊಂಡವರಿಗೆ ಆಶ್ರಯ, ಅಂಬೇಡ್ಕರ್ ವಸತಿ ಹಾಗೂ ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ವಸತಿ ಕಲ್ಪಿಸಲಾಗುವುದು ಎಂದು ಹೇಳಿದರು. ಮಳೆ ಅವಾಂತರಕ್ಕೆ ಜೀವ ಕಳೆದುಕೊಳ್ಳುವ ವ್ಯಕ್ತಿಗಳ ಕುಟುಂಬಗಳಿಗೆ ಕೇಂದ್ರದಿಂದ 4 ಲಕ್ಷ ರು. ಜತೆಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಲಕ್ಷ ರು. ಸೇರಿಸಿ ಒಟ್ಟು 5 ಲಕ್ಷ ರು. ಪರಿಹಾರ ನೀಡಲು ಆದೇಶ ನೀಡಲಾಗಿದೆ ಎಂದು ತಿಳಿಸಿದರು.

ಸದಸ್ಯ ಸಿ.ಎಂ.ಇಬ್ರಾಹಿಂ

ಸಚಿವ ಆರ್.ವಿ.ದೇಶಪಾಂಡೆ

1,687 ಕೋಟಿ ರು. ಬೆಳೆ ಹಾನಿ ಪರಿಹಾರ

ಕಳೆದ ವರ್ಷ 1687 ಕೋಟಿ ರುಪಾಯಿ ಬೆಳೆ ಹಾನಿ ಪರಿಹಾರವನ್ನು ನೀಡಲಾಗಿದೆ. 117 ಕೋಟಿ ರು ಮಳೆ ಹಾನಿ ಪರಿಹಾರ ವಿತರಿಸಲಾಗಿದೆ. ಬೆಳೆ ಹಾನಿ ಪರಿಹಾರ ರೈತರ ಖಾತೆಗೆ ನೇರವಾಗಿ ಜಮೆಯಾಗಿದೆ. ಮಳೆಹಾನಿ ಪರಿಹಾರ ಪ್ರಕ್ರಿಯೆಯು ಪಾರದರ್ಶಕತೆ ಕಾಪಾಡಿಕೊಂಡಿದೆ. ಮುಂದಿನ ದಿನಗಳಲ್ಲಿ ಪರಿಹಾರ ವಿತರಣೆಯಲ್ಲಿ ಮೀನಾಮೇಷ ಎಣಿಸುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬೇಕಾದಾಗ ಬಂದು ಹೋಗೋದಕ್ಕೆ ಇದೇನು ಬೀಗರ ಮನೆಯೇ?

ವಿಧಾನಪರಿಷತ್ತು: ಮೇಲ್ಮನೆ ಕಲಾಪಕ್ಕೆ ಪದೇಪದೆ ಗೈರಾಗುತ್ತಿರುವ ಸಚಿವರು, ಅಧಿಕಾರಿಗಳ ವಿರುದ್ಧ ಮತ್ತೊಮ್ಮೆ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ಹೊರಹಾಕಿದರು.

ಬುಧವಾರ ಕಲಾಪದ ಮಧ್ಯದಲ್ಲೇ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಿರುವ ಸಚಿವರ ಪಟ್ಟಿ ಓದಿದ ಸಭಾಪತಿ, ಉನ್ನತ ಶಿಕ್ಷಣ ಸಚಿವ ಜಿ.ಟಿ.ದೇವೇಗೌಡ, ಸಾರಿಗೆ ಸಚಿವ ಡಿ.ಸಿ.ತಮ್ಮಣ್ಣ, ಉಪಮುಖ್ಯಮಂತ್ರಿ ಪರಮೇಶ್ವರ ಅವರ ಗೈರು ಅಸಮಾಧಾನಕ್ಕೆ ಕಾರಣವಾಯಿತು.

ಸದನಕ್ಕೆ ಗೈರಾಗುವ ಸಚಿವರ ಪಟ್ಟಿ ಸಾರ್ವಜನಿಕರಿಗೆ, ಮಾಧ್ಯಮಗಳಿಗೆ ಗೊತ್ತಾಗಲಿ. ಸದನಕ್ಕೆ ಬೇಕಾಬಿಟ್ಟಿ ಬರಲು ಅವಕಾಶವಿಲ್ಲ. ಕಡ್ಡಾಯವಾಗಿ ಹಾಜರಿರಬೇಕಾದವರೂ ಗೈರಾದರೇ ಹೇಗೆ ಎಂದು ಪ್ರಶ್ನಿಸಿದರು. ಈ ಕುರಿತು ಪದೇಪದೆ ಹೇಳಿಸಿಕೊಳ್ಳಬಾರದು. ಕೂಡಲೆ ಸಚಿವರ ಗೈರು ಕುರಿತು ಮುಖ್ಯಮಂತ್ರಿಗಳಿಗೆ ಪತ್ರ ಬರೆಯಿರಿ ಎಂದು ಸಭಾನಾಯಕಿ ಜಯಮಾಲಾ ಅವರಿಗೆ ಸೂಚನೆ ನೀಡಿದರು. ಇದಕ್ಕೆ ಮಧ್ಯ ಪ್ರವೇಶಿಸಿದ ಪ್ರತಿ ಪಕ್ಷದ ನಾಯಕ ಕೋಟಾ ಶ್ರೀನಿವಾಸ್ ಪೂಜಾರಿ, ಸಚಿವರೇ ಸದನಕ್ಕೆ ಗೈರಾದರೆ, ಇನ್ನು ಅಧಿಕಾರಿಗಳು ಬಗ್ಗೆ ಹೇಳಬೇಕೆ ಎಂದು ವ್ಯಂಗ್ಯವಾಡಿದರು. ಸಚಿವ ಶಿವಶಂಕರ್ ರೆಡ್ಡಿ ಸದನದಲ್ಲಿ ಸಾಕಷ್ಟು ಸಚಿವರಿದ್ದಾರೆ. ಸಚಿವ ಡಿ.ಸಿ.ತಮ್ಮಣ್ಣ ಸದನಕ್ಕೆ ಬಂದಿದ್ದರು. ಈಗ ತಾನೇ ಇಲ್ಲೇ ಎಲ್ಲೋ ಹೊರಗೆ ಹೋಗಿದ್ದಾರೆ ಎಂದು ಸಮಜಾಯಿಷಿ ನೀಡಲು ಪ್ರಯತ್ನಿಸುತ್ತಿದ್ದಂತೆ, ಇದೇನೂ ಬಂದು ಹೋಗುವುದಕ್ಕೆ ಬೀಗರ ಮನೆ ಏನು ಎಂದು ಖಾರವಾಗಿ ಪ್ರಶ್ನಿಸಿದರು ಸಭಾಪತಿ.

ಟ್ವೀಟು ಖಾರ

ಸಾನ್ವಿ, @sanvi_k

ಎಲ್ಲ ಪಕ್ಷದವರಿಗೆ ಒಂದು ಪ್ರಶ್ನೆ! ಮೋದಿಯವರನ್ನು ಬಿಟ್ಟು ನಮ್ಮ ದೇಶದ ಪ್ರಧಾನಿಯಾಗಲು ಬೇರೆ ಯಾರು ಯೋಗ್ಯರು ಮತ್ತು ಯಾಕೆ? ಆತ್ಮಸಾಕ್ಷಿಗೆ ಮೋಸ ಮಾಡಬೇಡಿ.

ಗಣೇಶ್ ಚೇತನ್, @ganeshchetan

ಅಧಿಕಾರ ಸಿಕ್ಕಿಲ್ಲ ಅಂತ ಈ ಬಿಜೆಪಿ ಕರ್ನಾಟಕ ಘಟಕದವರು ನಾಡೊಡೆಯುವ ಕೆಲಸಕ್ಕೆ ಕೈ ಹಾಕುತ್ತಾರೆ ಅಂದರೆ ಇವರು ಎಷ್ಟು ಅಧಿಕಾರ ದಾಹಿಗಳು ಅದಕ್ಕೋಸ್ಕರ ಏನು ಬೇಕಾದರು ಮಾಡಲು ಹೇಸುವುದಿಲ್ಲ ಅಂತ ಸ್ಪಷ್ಟವಾಗುತ್ತದೆ.

ಮುನ್ನೋಟ ಬುಕ್ ಸ್ಟೋರ್, @munnotaweb

'ಕರ್ನಾಟಕವೊಂದೇ' ಎಲ್ಲ ಸಮಸ್ಯೆಗಳಿಗೂ ರಾಜ್ಯ ಒಡೆಯುವುದೇ ಪರಿಹಾರ ಅನ್ನುವ ವಾದವೊಂದನ್ನು ಮುನ್ನೆಲೆಗೆ ತರುವ ವ್ಯವಸ್ಥಿತ ಪ್ರಯತ್ನಗಳಾಗುತ್ತಿರುವ ಈ ಹೊತ್ತಿನಲ್ಲಿ ಕರ್ನಾಟಕ ಯಾಕೆ ಒಂದಾಗಿರಬೇಕು ಎನ್ನುವ ಬಗ್ಗೆ ಕನ್ನಡಿಗರಲ್ಲಿ ಅರಿವು ಮೂಡಿಸಬೇಕಿದೆ..

ಮಲ್ಲಿಕಾರ್ಜುನ್.ಬಿ, @arjuna04

ಇದೇ ರೀತಿ ಕರ್ನಾಟಕದ ಬೇರೆ ಬೇರೆ ಡಿವಿಷನ್ ಅಲ್ಲೂ ಕನ್ನಡವನ್ನು ಕಡೆಗಣಿಸಿ ಹಿಂದಿ ಹೇರುತ್ತ ತಾರತಮ್ಯ ಮಾಡುತ್ತಾರೆ. ಕರ್ನಾಟಕವನ್ನು ಒಡೆಯುವ ಮಾತಾಡುವ ಹಿಂದಿ/ಸಂಸ್ಕೃತ ಪ್ರೇಮಿಗಳು ಮತ್ತು ನಕಲಿ ದೇಶಭಕ್ತರಿಗೆ ಇದೆಲ್ಲ ಕಾಣುವುದಿಲ್ಲ ಬಿಡಿ! ಅವರಿಗೆ ಇದು ಹೇರಿಕೆಯೆಂದೇ ಅನಿಸುವುದಿಲ್ಲ!

ಜಯತೀರ್ಥ ನಾಡಗೌಡ, @jayateerthbn

ಮಾನ್ಯ ಶ್ರೀರಾಮುಲು ಅವರೇ ಉತ್ತರ ಕರ್ನಾಟಕ ಭಾಗದಿಂದ ಶಾಸಕರಾಗಿ, ಸಚಿವರಾಗಿ, ಸಂಸದರಾಗಿ, ಹುಬ್ಬಳ್ಳಿಯ ನೈರುತ್ಯ ರೈಲ್ವೆಯಲ್ಲಿ ಉ.ಕ. ಭಾಗದ ಎಷ್ಟು ಜನಕ್ಕೆ ಕೆಲಸ ಕೊಡಿಸಿದ್ದೀರಿ? ಧಾರವಾಡದ ಐಐಟಿ ಲ್ಲಿ ಎಷ್ಟು ಜನ ಉ.ಕ.ದವರಿಗೆ ಮೀಸಲಾಗಿವೆ?